**ಆಪರ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬೈಲಹೊಂಗಲ.**

**ಸಿ.ಸಿ.ನಂ.949/2023**

ರಾಜ್ಯದ ಪರವಾಗಿ ದೊಡವಾಡ ಪೊಲೀಸ ಠಾಣೆ

... ಪಿರ್ಯಾದುದಾರರು.

// ವಿರುದ್ದ //

ಸಿದ್ದಲಿಂಗಯ್ಯ ಗುರುವಯ್ಯ ಗಿಡಮೂದಿ

... ಆರೋಪಿತ.

**ದೋಷಾರೋಪಣೆ**

ನಾನು ಬಸವರಾಜ ನಾಯಕ ಬಿ.ಎ.ಎಲ್.ಎಲ್.ಬಿ.ಎಲ್.ಎಲ್.ಎಂ ಅಪರ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬೈಲಹೊಂಗಲ ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಅಂದರೆಃ

ಸಿದ್ದಲಿಂಗಯ್ಯ ಗುರುವಯ್ಯ ಗಿಡಮೂದಿ
ಸಾಃ ಗೋವನಕೊಪ್ಪ, ತಾಃ ಬೈಲಹೊಂಗಲ

**ಈ ಕೆಳಗಿನ ಆರೋಪಕ್ಕೆ ಗುರಿಪಡಿಸುತ್ತಿದ್ದೆನೆ.**

ಆರೋಪಿಯಾದ ನಿಮ್ಮ ಮೇಲೆ ಆರೋಪಿಸುವುದೇನೆಂದರೆ, ದೊಡವಾಡ ಪೊಲೀಸ ಠಾಣಾ ಹದ್ದಿಯ ಪೈಕಿ ಗೋವನಕೊಪ್ಪ ಗ್ರಾಮದ ಗೌಟನದಲ್ಲಿ ನೀರಿನ ಟ್ಯಾಂಕ ಹತ್ತಿರ ಇರುವ ಸರ್ವಜನಿಕ ಸ್ಥಳದಲ್ಲಿ ದಿಃ23.03.2023 ರಂದು 15.00 ಗಂಟೆಯ ಸಮಯದಲ್ಲಿ ಆರೋಪಿತನಾದ ನೀವು ಸರ್ಕಾರದಿಂದ ಅಧಿಕೃತ ಲೈಸನ್ಸ ವ ಪರ್ಮಿಟ್ ಹೊಂದದೇ, ಬೇಕಾಯ್ದೆಶೀರ ರೀತಿಯಿಂದ ತನ್ನ ಸ್ವಂತ ಲಾಭಕ್ಕೋಸ್ಕರ ರೂ.2107/- ರೂಪಾಯಿ 8 ಪೈಸೆಗಳು ಕಿಮ್ಮತ್ತಿನ ಓರಿಜನಲ್ ಚಾಯಿಸ್ ಡಿಲಕ್ಸ ವಿಸ್ಕಿ ಕಂಪನಿಯ 90 ಎಮ್.ಎಲ್ ದ 60 ಸರಾಯಿ ತುಂಬಿದ ಟೆಟ್ರಾ ಪಾಕೇಟಗಳನ್ನು ಎಲ್ಲಿಂದಲೋ ತಂದು, ಅನಧೀಕೃತವಾಗಿ ಮಾರಾಟ ಮಾಡುವ ಉದ್ದೇಶದಲ್ಲಿ ಇದ್ದಾಗ ಸಿಕ್ಕಿದ್ದು ಆ ಪ್ರಕಾರ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಅದೇ ದಿನ, ಸಮಯ, ಸ್ಥಳದಲ್ಲಿ ಆರೋಪಿತರಾದ ನೀವು ಮೇಲೆ ಹೇಳಿದ ಸರಾಯಿ ತುಂಬಿದ ಟೆಟ್ರಾ ಪಾಕೇಟಗಳನ್ನು ಎಲ್ಲಿಂದಲೋ ತಂದು ತಮ್ಮ ತಾಬಾದಲ್ಲಿ ಇಟ್ಟುಕೊಂಡು ಅನಧೀಕೃತವಾಗಿ

ಮಾರಾಟ ಮಾಡುವ ಉದ್ದೇಶದಲ್ಲಿ ಇದ್ದಾಗ ಸಿಕ್ಕಿದ್ದು ಆ ಪ್ರಕಾರ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.34 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಪ್ರಶ್ನೆ 1: ಈ ಮೇಲಿನ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೇ?

ಉತ್ತರ:

ಪ್ರಶ್ನೆ ನಂ.2 : ಈ ಮೇಲಿನ ಆಪಾಧನೆಯನ್ನು ನೀವು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯನ್ನು ನಡೆಸುವಿರಾ?

ಉತ್ತರ :

(ಈ ಮೇಲಿನ ದೋಷಾರೋಪಣೆ ಸಾರಾಂಶವನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಈ ದಾಖಲೆಯು ಆರೋಪಿಯು ನೀಡಿದ ನಿಜವಾದ ಮತ್ತು ಅವರ ಪೂರ್ಣವಾದ ಹೇಳಿಕೆಯನ್ನು ಒಳಗೊಂಡಿದೆ ಎಂದು ಈ ಮೂಲಕ ದೃಡೀಕರಿಸಲಾಗಿದೆ.)

ಸಹಿ/-

ದಿ.01.07.2025 **ಅ.ದಿ.ನ್ಯಾ.ಪ್ರಾ.ದ.ನ್ಯಾ.ದಂ.ಬೈಲಹೊಂಗಲ**